ಮೂಲ ದಾವಾ ಸಂಖ್ಯೆ. 180/2016 ಪಿ ಡಬ್ಲ್ಯೂ 2

(ದಿನಾಂಕ 10-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜಿ ಕೆ ಜಿ ವಕೀಲರಿಂದಃ-

ವಂಟಗೋಡಿ ರುದ್ರಪ್ಪ ಇವರು ಒಟ್ಟು ಮೂರು ಜನ ಸಹೋದರರು ಅವರೆಂದರೆ ವಂಟಗೋಡಿ ರುದ್ರಪ್ಪ, ವೀರಭದ್ರಪ್ಪ ಮತ್ತು ಕೊಟ್ರಪ್ಪ ಇರುತ್ತಾರೆ. ಕೊಟ್ರಪ್ಪನ ಮಗ ಚನ್ನಬಸಪ್ಪ ಎಂದರೆ ಸರಿ. ಸದರಿ 3 ಜನರು ದಾವಾಸ್ತಿಯಲ್ಲಿ ಸುಮಾರು 40 ವರ್ಷದಿಂದ ಗುಡಿಸಲು ಹಾಕಿಕೊಂಡು ವಾಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಮೂರು ಜನರು ಈಗ ಮೃತಪಟ್ಟಿರುತ್ತಾರೆ. ಸದರಿ 3 ಜನರ ಮಕ್ಕಳ ಹೆಸರು ನನಗೆ ಹೇಳಲು ಆಗುವುದಿಲ್ಲ.

ಸಣ್ಣಕೊಟ್ರಗೌಡ ಮತ್ತು ಕೋಗಳಿ ರುದ್ರಮ್ಮ ಇವರು ದಾವಾಸ್ತಿಯಲ್ಲಿ ಮನೆಕಟ್ಟಿಕೊಂಡು ವಾಸವಾಗಿರುತ್ತಾರೆಂದರೆ ಸಾಕ್ಷಿಯು 10-15 ವರ್ಷದಿಂದ ಮನೆ ಕಟ್ಟಿಕೊಂಡು ವಾಸವಾಗಿರುತ್ತಾರೆನ್ನುತ್ತಾರೆ. ಕೊಟ್ರಪ್ಪನ ಮಗ ಚನ್ನಬಸಪ್ಪ ನನಗೆ ಗೊತ್ತು. ಕೊಟ್ರಪ್ಪನ ಮಗ ಚನ್ನಬಸಪ್ಪ ಇವರಿಂದ ಸದರಿಯವರು ಆಸ್ತಿ ಖರೀದಿ ಮಾಡಿಕೊಂಡು ದಾವಾಸ್ತಿಯಲ್ಲಿ ಮನೆ ಕಟ್ಟಿಕೊಂಡು ವಾಸವಾಗಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸುಮಾರು 25 ವರ್ಷದಿಂದ ವೀರಣ್ಣ ಮತ್ತು ಗವಿಸಿದ್ದಪ್ಪ ಇವರು ದಾವಾಸ್ತಿಯಲ್ಲಿ ಮನೆ ಕಟ್ಟಿಕೊಂಡು ವಾಸವಾಗಿರುತ್ತಾರೆಂದರೆ ಸಾಕ್ಷಿಯು ಗವಿಸಿದ್ದಪ್ಪ ಇವರು ಮನೆ ಕಟ್ಟಿಕೊಂಡಿಲ್ಲ ಆದರೆ ವೀರಣ್ಣ ಇವರು ಸುಮಾರು 10-15 ವರ್ಷದ ಹಿಂದೆ ಮನೆಕಟ್ಟಿಕೊಂಡು ವಾಸವಾಗಿರುತ್ತಾರೆನ್ನುತ್ತಾರೆ. ವಾದಿಯ ತಾಯಿ ಮರಣ ಹೊಂದಿ ಸುಮಾರು 30 ವರ್ಷವಾಗಿರಬಹುದು. ವಾದಿಯು ತನ್ನ ತಾಯಿಯ ಮರಣದ ದಿನದಿಂದ ದಾವೆ ದಾಖಲಿಸುವವರೆಗೂ ವೀರಣ್ಣ, ಕೋಗಳಿ ರುದ್ರಮ್ಮ ಮತ್ತು ಕೊಟ್ರಗೌಡ ಇವರಿಗೆ ಯಾವುದೇ ರೀತಿಯಿಂದ ತಕರಾರು ಮಾಡಿಲ್ಲವೆಂದರೆ ಸರಿಯಲ್ಲ.

ದಾವಾಸ್ತಿಯು ಮೂಲತಃ ಪೂಜಾರ ಯಂಕಮ್ಮ ಇವರಿಗೆ ಸೇರಿದ್ದು ಇರುತ್ತದೆ. ಯಂಕಮ್ಮ ಇವರಿಂದ ವಾದಿಯ ತಾಯಿಗೆ ಬಂತು. ಒಟ್ಟು 6.39 ಎಕರೆ ಜಮೀನಿನಲ್ಲಿ ಬಹಳಷ್ಟು ಕ್ಷೇತ್ರವನ್ನು ವಾದಿಯ ತಾಯಿ ಮತ್ತು ವಾದಿ ಬೇರೆಯವರಿಗೆ ಮಾರಾಟ ಮಾಡಿದ್ದಾರೆಂದರೆ ಸರಿ. ಸದರಿ ಒಟ್ಟು ಕ್ಷೇತ್ರದಲ್ಲಿ 0.59 ಸೆಂಟ್ಸ ಕ್ಷೇತ್ರದಲ್ಲಿ ಮಾತ್ರ ವಾದಿ ಜಯಪ್ಪ ಸ್ವಾಧೀನದಲ್ಲಿರುತ್ತಾರೆಂದರೆ ಸರಿ. ಸದರಿ 6.39 ಎಕರೆ ಜಮೀನಿನಲ್ಲಿ ಖರೀದಿಗೆ ಪಡೆದ ಖರೀದಿದಾರರು ಸ್ವಾಧೀನದಲ್ಲಿರುತ್ತಾರೆಂದರೆ ಸಾಕ್ಷಿಯು ಸಂಪೂರ್ಣ ಆಸ್ತಿ ಖರೀದಿಯಾಗಿಲ್ಲ 3 ಎಕರೆ ಚಿಲ್ಲರೆ ಜಮೀನು ಮಾತ್ರ ಖರೀದಿಯಾಗಿದೆ ಎನ್ನುತ್ತಾರೆ.

ಮೂಲ ದಾವಾ ಸಂಖ್ಯೆ. 180/2016 ಪಿ ಡಬ್ಲ್ಯೂ 2

ಜಯಪ್ಪ ಇವರು ವಂಟಗೋಡಿ ವೀರಣ್ಣ, ಶಿವಮೂರ್ತಿ, ಗುರುಸಿದ್ದಪ್ಪ, ಗುರುಸಿದ್ದಯ್ಯ ಮತ್ತು ಕೋಗಳಿ ರುದ್ರಮ್ಮ ಇವರ ವಿರುದ್ಧ ದಾವೆಗಳನ್ನು ದಾಖಲಿಸಿರುತ್ತಾರೆಂದರೆ ಸರಿ. ಸದರಿ ದಾವಾಸ್ತಿಗಳಲ್ಲಿ ವಾದಿಯು ಭಿತ್ತಿ ಬೆಳೆ ಮಾಡದೇ ಸುಮಾರು 40 ವರ್ಷವಾಗಿದೆ ಎಂದರೆ ಸಾಕ್ಷಿಯು 40 ವರ್ಷವಾಗಿಲ್ಲ 30 ವರ್ಷವಾಗಿದೆ ಎನ್ನುತ್ತಾರೆ. ಸದರಿಯವರಿಗೆ ವಾದಿಯ ತಾಯಿ ಮತ್ತು ವಾದಿ ಮಾರಾಟ ಮಾಡಿರುವುದರಿಂದ ಸದರಿ ಆಸ್ತಿಗಳಲ್ಲಿ ವಾದಿಯು ಸ್ವಾಧೀನದಲ್ಲಿಲ್ಲವೆಂದರೆ ಸರಿಯಲ್ಲ. ಸದರಿ ವೀರಣ್ಣ, ಶಿವಮೂರ್ತಿ, ಗುರುಸಿದ್ದಪ್ಪ, ಗುರುಸಿದ್ದಯ್ಯ ಮತ್ತು ಕೋಗಳಿ ರುದ್ರಮ್ಮ ಇವರು ತಾವು ಖರೀದಿಸಿದ ಆಸ್ತಿಗಳಲ್ಲಿ ಮನೆ ಕಟ್ಟಿಕೊಂಡಿರುತ್ತಾರೆ ಅದಕ್ಕೆ ಪಂಚಾಯ್ತಿಯವರು ನಂಬರ್ ಸಹಾ ಕೊಟ್ಟಿರುತ್ತಾರೆಂದರೆ ಸರಿಯಲ್ಲ.

ವಂಟಗೋಡಿ ರುದ್ರಪ್ಪ ಇವರು ತಮ್ಮ ಸಹೋದರರಲ್ಲಿ ಹಿರಿಯರು ಇರುತ್ತಾರೆ. ಸನ್ 1972 ರಲ್ಲಿ ವಂಟಗೋಡಿ ರುದ್ರಪ್ಪ ಇವರಿಗೆ ವಾದಿಯ ತಾಯಿ ಸದರಿ 6.39 ಸೆಂಟ್ಸ ಒಟ್ಟು ಜಮೀನಿನಲ್ಲಿ ಪೂ-ಪಃ 114 ಅಡಿ ಮತ್ತು ಉ-ದಃ72 ಅಡಿ ಕ್ಷೇತ್ರವನ್ನು ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಸದರಿ ಕ್ಷೇತ್ರದಲ್ಲಿ ರುದ್ರಪ್ಪನ ಸಹೋದರರು ಮತ್ತು ರುದ್ರಪ್ಪ ಸಮನಾಗಿ 3 ಭಾಗ ಮಾಡಿಕೊಂಡು ಅವುಗಳಲಿಲ ಮನೆಕಟ್ಟಿಕೊಂಡು ವಾಸವಾಗಿರುತ್ತಾರೆಂದರೆ ಸರಿಯಲ್ಲ. ಸದರಿ ಜಮೀನಿನ ಬಗ್ಗೆ ನನಗೆ ಯಾವುದೇ ರೀತಿಯ ಮಾಹಿತಿ ಇಲ್ಲದಿದ್ದರೂ ಸಹಾ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಪ್ರಮಾಣಪತ್ರವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ